ಎಕ್ಸೂ. ನಂಃ 47/2016
ಎ .ಡಬ್ಲ್ಯೂಃ 1

**ದಿಃ 23-08-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಪಿ.ಎಮ್. ಬಿ ವಕೀಲರಿಂದಃ

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

ಜೆ ಡಿ ಆರ್ ಇವರು ಮಹಾಲಕ್ಷ್ಮಿ ಅರ್ಬನ್ ಕೋ ಆಪರೇಟಿವ್ ಸೊಸೈಟಿಯಲ್ಲಿ ವ್ಯವಸ್ಥಾಪಕ ಎಂದು ಕೆಲಸ ಮಾಡುತ್ತಿರುವ ಬಗ್ಗೆ ಆ ಸಂಸ್ಥೆಯ ಅಡಾವೆ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸದರಿ ಅಡಾವೆ ಪತ್ರಿಕೆಯ ಕೊನೆಯ ಪುಟದಲ್ಲಿ ಜೆ ಡಿ ಆರ್ ಇವರ ಭಾವಚಿತ್ರವಿದ್ದು ಸಾಕ್ಷಿ ಅದನ್ನು ಗುರುತಿಸಿದ್ದು ಸದರಿ ಭಾವಚಿತ್ರವಿರುವ ಭಾಗವನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸದರಿಯವರ ಹೆಸರಿನಲ್ಲಿ ಬಜಾಜ್ ಪಲ್ಸರ್ ವಾಹನವಿದ್ದು ಆ ಬಗ್ಗೆ ಸ್ಟೇಟ್ಸ ರಿಪೋರ್ಟ ಹಾಜರಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಆರ್.ಎ. ನಂ. 10/2012 ರಲ್ಲಿಯ ಅಪೀಲಿನ ದೃಢೀಕತ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.ಸದರಿ ಪ್ರಕರಣದಲ್ಲಿ ಜೆ ಡಿ ಆರ್ ಇವರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಮತ್ತು ಅದರ ಜೊತೆ ಸಲ್ಲಿಸಲಾದ ಪ್ರಮಾಣಪತ್ರವನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ4 ಎ ಮತ್ತು 5 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ.**
**ಹಾವೇರಿ.**

ಎಕ್ಸೂ. ನಂ៖ 47/2016
ಎ .ಡಬ್ಲ್ಯೂ៖ 1

ಎಕ್ಸೂ. ನಂಃ 47/2016
ಎ .ಡಬ್ಲ್ಯೂಃ 1